3) ಕೇಂದ್ರೀಯ ತೆಂಗು ಸಸ್ಯಾಗಾರ 7,970.00
ಮುನಿರಾಬಾದ್ ,ರಾಯಚೂರು ಜಿಲ್ಲೆ

4) ಹೈಬ್ರಿಡ್ ತೆಂಗು ಉತ್ಪಾದನಾ 68,000.00
ಸಸ್ಯಗಾರ ಕೃಷ್ಣರಾಜಸಾಗರ, ಮಂಡ್ಯ ಜಿಲ್ಲೆ.

ಊ) ಚಾಮರಾಜನಗರ ತಾಲ್ಲೂಕಿನಲ್ಲಿ ಇದುವರೆವಿಗೂ 316 ಎಕರೆ ಪ್ರದೇಶದಲ್ಲಿ ಈ ಕೀಟಬಾಧೆ ತಗುಲಿದೆ. ಈ ಕೀಟದ ಸಮಗ್ರ ಸಾಮೊಹಿಕ ನಿಯಂತ್ರಣಕ್ಕಾಗಿಯೇ ಒಂದು ತಂಡವನ್ನು ಈಗಾಗಲೇ ರಚಿಸಲ್ಪಟ್ಟಿದ್ದು ಅದು ಕಾರ್ಯೋನ್ಮುಖವಾಗಿದೆ.

ಸಹಕಾರ ಸಂಸ್ಥೆಗಳಿಗೆ ನಾಮಕರಣ

931 - ಶ್ರೀ ವಾಟಾಳ್‌ನಾಗರಾಜ್ (ಚಾಮರಾಜನಗರ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಸಹಕಾರಿ ಸಂಸ್ಥೆಗಳಿಗೆ ನಾಮಕರಣ ಪದ್ಧತಿಯನ್ನು ರದ್ದುಪಡಿಸಲು ಸರ್ಕಾರವು ತೀರ್ಮಾನಿಸಿದೆಯೇ?*

ಆ) *ಈಗಿನ ಪ್ರಕಾರ ಸಹಕಾರಿ ಸಂಸ್ಥೆಗಳಿಗೆ ನಾಮಕರಣ ಮಾಡಲು ಯಾವ ಸೂತ್ರಗಳನ್ನು ಅಳವಡಿಸಲಾಗುವುದು?*

ಎಸ್.ಎಸ್. ಪಾಟೀಲ್ (ಸಹಕಾರ ಸಚಿವರು) :

ಅ) ತಿದ್ದುಪಡಿ ತರುವಾಗ ಪರಿಶೀಲಿಸಲಾಗುವುದು.

ಆ) ರಾಜ್ಯದಲ್ಲಿನ ಸಹಕಾರ ಸಂಘಗಳಿಗೆ ಸರ್ಕಾರವು ಷೇರು ಧನವನ್ನು ನೀಡಿದಲ್ಲಿ, ಅಥವಾ ಸಾಲ ಮರು ಪಾವತಿಗೆ ಸರ್ಕಾರ ಗ್ಯಾರಂಟಿ ನೀಡಿದ್ದಲ್ಲಿ ಅಂತಹ ಸಹಕಾರ ಸಂಘಗಳಿಗೆ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ, 1959ರ ಕಲಂ 29(1) ಹಾಗೂ 53 ಎ ಅನ್ವಯ ಸರ್ಕಾರದಿಂದ ನಾಮನಿರ್ದೇಶನ ಮಾಡಲಾಗುವುದು.

ಕೆಂಪುತಲೆ ಹುಳು ಕುರಿತು

932 - ಶ್ರೀ ಟಿ.ಹೆಚ್. ಬಸವರಾಜು (ಹೊಸದುರ್ಗ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಹೊಸದುರ್ಗ ತಾಲ್ಲೂಕಿನಲ್ಲಿ ಪ್ರತಿವರ್ಷದ ಮುಂಗಾರು ಕಾಲದಲ್ಲಿ ಪೈರಿಗೆ ಬೀಳುವ ಕೆಂಪುತಲೆ ಕಂಬಳಿಹುಳುಗಳ ಹಾವಳಿ ಹೆಚ್ಚಾಗಿದ್ದು ಇದಕ್ಕೆ ಸರ್ಕಾರದವರು ಕೈಗೊಂಡ ಮುಂಜಾಗ್ರತಾ ಕ್ರಮಗಳು ಯಾವುವು?*